ಕರ್ನಾಟಕ ರಾಜ್ಯ ವಿಧಾನಮಂಡಲ,
ಗ್ರಂಥಾಲಯ,

ಬೆಳಗೋಡು ಮತ್ತು ಹಾಸನ ನಡುವೆ ಈಶ್ವರಹಳ್ಳಿ ಬಳಿ ಇರುವ ಸೇತುವೆ

986-ಶ್ರೀ ಬಿ.ಆರ್. ಗುರುದೇವ್ (ಸಕಲೇಶಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಳಗೋಡು - ಹಾಸನ ನಡುವೆ ಈಶ್ವರಹಳ್ಳಿ ಬಳಿ ಇರುವ ಸೇತುವೆಯು ಸುಮಾರು ನೂರು ವರ್ಷಗಳಷ್ಟು ಹಳೆಯದಾಗಿದ್ದು, ಆ ಸೇತುವೆಯು ಶಿಥಿಲಗೊಂಡಿರುವುದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾದವರ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಹೌದು. ಈ ಸೇತುವೆಯನ್ನು ಸುಮಾರು 100 ವರ್ಷಗಳ ಹಿಂದೆ ನಿರ್ಮಿಸಿದ್ದು ಇತ್ತೀಚೆಗೆ ಮಳೆಯಿಂದ ಗುದ್ದುಕಂಬದ ಬಳಿ ಕೊರೆತ ಉಂಟಾಗಿದ್ದಿತು.

ಆ) ದುರಸ್ತಿ ಕಾಮಗಾರಿಯನ್ನು 0.30 ಲಕ್ಷ ರೂ.ಗಳ ವೆಚ್ಚದಲ್ಲಿ ತೆಗೆದುಕೊಳ್ಳಲಾಗಿದೆ.

ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸೌಲಭ್ಯ

1006 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ಕುಂಜಾಲು ಪೇಟೆಯಲ್ಲಿ ಎಸ್.ಆರ್. ಡಬ್ಲ್ಯೂ ಎಸ್. ಯೋಜನೆಯನ್ವಯ ಕುಡಿಯುವ ನೀರಿನ ಯೋಜನೆ ಮಂಜೂರು ಆಗಿದ್ದು ಯಾವಾಗ?*

ಆ) *ಎಷ್ಟು ವರ್ಷಗಳಿಂದ ಈ ಕಾಮಗಾರಿ ಅರ್ಧಕ್ಕೆ ನಿಂತಿರುತ್ತದೆ? ಹಾಗೂ ವಿಳಂಬಕ್ಕೆ ಕಾರಣಗಳೇನು?*

ಇ) *ಜನರಿಗೆ ಅತಿ ಅನುಕೂಲವಿರುವ ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು.*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು):

ಅ) ಆಡಳಿತಾತ್ಮಕ ಮಂಜೂರಾತಿ ದಿನಾಂಕ 27-3-1986

ತಾಂತ್ರಿಕ ಮಂಜೂರಾತಿ ದಿನಾಂಕ 31-10-1986

ಆ) ನಾಲ್ಕು ವರ್ಷ. ಬಾವಿಯಿಂದ ನೀರು ಶೇಖರಣಾ ತೊಟ್ಟಿಗೆ ಏರು ಕೊಳವೆಯನ್ನು ಹಾಕಲು ಭೂಮಿ ದೊರೆಯದೆ ಇರುವುದರಿಂದ ಈ ಕಾಮಗಾರಿಯ ಕೆಲಸವು ನಿಂತಿರುತ್ತದೆ. ಖಾಸಗಿ ಜಮೀನು ಮಾಲೀಕರು ತಡೆಯಾಜ್ಞೆ ತಂದಿದ್ದು ಪ್ರಕರಣವು ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗಬೇಕಾಗಿದೆ.

ಏರು ಕೊಳವೆ ಹಾಕಲು ಬೇಕಾಗಿರುವ ಭೂಮಿಯನ್ನು ಜಿಲ್ಲಾ ಪರಿಷತ್ತು ಸ್ವಾಧೀನ ಪಡಿಸಿಕೊಂಡ ಮೇಲೆ ಅಥವಾ ಭೂಮಿಯು ಜಿಲ್ಲಾಪರಿಷತ್ತಿಗೆ ಹಸ್ತಾಂತರವಾದ ಕೂಡಲೆ.